
| ಗಂಟು ರೋಗ | | | | |
|---|---|---|---|---|
| ತಿಂಗಳು | ಚಾಮರಾಜ ನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಹಾವೇರಿ |
| ಜನವರಿ | | | | |
| ಫೆಬ್ರವರಿ | | | | |
| ಮಾರ್ಚ್ | | | | |
| ಏಪ್ರಿಲ್ | | | | |
| ಮೇ | | | | |
| ಜೂನ್ | | | | |
| ಜುಲೈ | | | | |
| ಆಗಸ್ಟ್ | | | | |
| ಸೆಪ್ಟೆಂಬರ್ | | | | |
| ಅಕ್ಟೋಬರ್ | | | | |
| ನವೆಂಬರ್ | | | | |
| ಡಿಸೆಂಬರ್ | | | | |

ಕನಿಷ್ಠ   ಸಾಧಾರಣ   ತೀವ್ರ






**ಲಕ್ಷಣಗಳು:** ರೋಗಗ್ರಸ್ಥ ಹುಳುವಿನ ಬೆಳವಣಿಗೆ ಕುಂಠಿತಗೊಳ್ಳುತ್ತದೆ, ಜ್ವರಕ್ಕೆ ಒಂದೇ ಸಮನಾಗಿ ಕೂರುವುದಿಲ್ಲ ಹಾಗೂ ಜ್ವರದ ಅವಧಿ ಹೆಚ್ಚಾಗುತ್ತದೆ, ಸೋಂಕಿನ ಪ್ರಾರಂಭದಲ್ಲಿ ರೋಗಗ್ರಸ್ಥ ಹುಳುಗಳು ಆರೋಗ್ಯವಂತ ಹುಳುವಿನಂತೆ ಕಂಡು ಬಂದರೂ ರೋಗ ಹೆಚ್ಚಾದಂತೆ ಆಹಾರ ತಿನ್ನದೆ ಕುಗ್ಗಿ ದುರ್ಬಲವಾಗುತ್ತವೆ. ಹುಳುವಿನ ಬಣ್ಣ ಕಂದು ಬಣ್ಣಕ್ಕೆ ತಿರುಗುತ್ತದೆ ಹಾಗೂ ಹುಳುವಿನ ಶರೀರದ ಗಾತ್ರದಲ್ಲಿ ವ್ಯತ್ಯಾಸವಿರುತ್ತದೆ, ರೋಗದ ತೀವ್ರತೆ ಹೆಚ್ಚಾದಂತೆ ಹುಳುಗಳು ಮೃದುವಾಗಿ, ವಾಂತಿ ಮತ್ತು ದ್ರವರೂಪದ ಹಿಕ್ಕೆಯನ್ನು ಸ್ರವಿಸುತ್ತವೆ, ಸತ್ತ ಹುಳುಗಳಿಗೆ ಬ್ಯಾಕ್ಟೀರಿಯಾ ಸೋಂಕು ತಗಲುವುದರಿಂದ ಅವು ಕಪ್ಪು ಬಣ್ಣಕ್ಕೆ ತಿರುಗಿ ಕೆಟ್ಟ ವಾಸನೆಯನ್ನು ಹೊರಸೂಸುತ್ತವೆ.

**ನಿರ್ವಹಣೆ:** ಶಿಫಾರಸ್ಸು ಮಾಡಲಾಗಿರುವ ಸೋಂಕು ನಿವಾರಕಗಳಿಂದ ಹುಳು ಸಾಕಣೆ ಮನೆ, ಪರಿಸರ ಹಾಗೂ ಪರಿಕರಗಳನ್ನು ಎರಡು ಬಾರಿ ಸೋಂಕುನಿವಾರಣೆಗೆ ಮಾಡಿ, ನೊಂದಾಯಿತ ಬೀಜೋತ್ಪಾದನಾ ಕೇಂದ್ರಗಳಿಂದ ದೃಢೀಕರಿಸಿದ ರೋಗರಹಿತ ಮೊಟ್ಟೆಗಳಿಂದ ಹೊರಬಂದ ಮರಿ ಹುಳುಗಳನ್ನೇ ಸಾಕಾಣಿಕೆ ಮಾಡಿ, ಹಾಸಿಗೆ ಸೋಂಕು ನಿವಾರಕಗಳಾದ ಅಂಕುಶ್/ವಿಜೇತ ನಿಗದಿತ ಸಮಯಕ್ಕೆ ಶಿಫಾರಸ್ಸು ಮಾಡಲಾದ ಪ್ರಮಾಣದಲ್ಲಿ ಉಪಯೋಗಿಸಿ, ಬಿತ್ತನೆ ಬೆಳೆಯಲ್ಲಿ ರೋಗ ಬರದಂತೆ ನಿಗಾವಹಿಸಿ.

ರೇಷ್ಮೆ ಉತ್ಪಾದನೆ ಮತ್ತು ಗುಣಮಟ್ಟವನ್ನು ಬಾಧಿಸುವ ಪ್ರಮುಖ ಅಂಶಗಳಲ್ಲಿ ರೇಷ್ಮೆ ಹುಳುಗಳಿಗೆ ತಗಲುವ ರೋಗಗಳು ಬಹುಮುಖ್ಯ. ರೋಗಗಳ ತಗಲುವಿಕೆ ಹಾಗೂ ತೀವ್ರತೆ ಆಯಾ ಪ್ರದೇಶಗಳಲ್ಲಿರುವ ಪರಿಸರೀಯ ಅಂಶಗಳ ಮೇಲೆ ಅವಲಂಬಿಸಿದ್ದು ಇದರಲ್ಲಿ ತೇವಾಂಶ ಮತ್ತು ಉಷ್ಣಾಂಶ ಪ್ರಮುಖ ಪಾತ್ರವಹಿಸುತ್ತದೆ.

ಸಾಮಾನ್ಯವಾಗಿ ರೋಗಗಳು ಕಂಡು ಬರುವ ಋತುಮಾನಗಳ ಬಗ್ಗೆ ಮಾಹಿತಿ ಪಡೆದುಕೊಂಡು ಸಕಾಲಕ್ಕೆ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು ರೋಗಗಳಿಂದ ಆಗಬಹುದಾದ ಆರ್ಥಿಕ ನಷ್ಟವನ್ನು ತಡೆಯಬಹುದು. ಈ ದಿಸೆಯಲ್ಲಿ ಈ ಕ್ಯಾಲೆಂಡರ್ ಉಪಯುಕ್ತವಾಗಿರುತ್ತದೆ.




**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ನಿರ್ದೇಶಕರು

ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ

ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ

ಭಾರತ ಸರ್ಕಾರ, ಮಾನಂದವಾಡಿ ರಸ್ತೆ

ಶ್ರೀರಾಂಪುರ, ಮೈಸೂರು – 570008

ಫೋನ್: 0821–2362757, 2362406

ಫ್ಯಾಕ್ಸ್ : 0821–2362845

email: cstrimys.csb@nic.in   www.csrtimys.res.in


Copies: 250   February 2019   Design & Layout: J. Justin Kumar

# ರೇಷ್ಮೆ ಹುಳುಗಳಿಗೆ ತಗಲುವ ರೋಗಗಳ ಕ್ಯಾಲೆಂಡರ್




**ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ**

(ISO 9001: 2015 ಪ್ರಮಾಣೀಕೃತ)

ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ

ಭಾರತ ಸರ್ಕಾರ, ಶ್ರೀರಾಂಪುರ

ಮೈಸೂರು – 570008

## ಹಾಲುತೊಂಡೆ ರೋಗ

| ತಿಂಗಳು | ಚಾಮರಾಜ ನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಹಾವೇರಿ |
|---|---|---|---|---|
| ಜನವರಿ | ಕನಿಷ್ಠ | ಸಾಧಾರಣ | ಕನಿಷ್ಠ | ಸಾಧಾರಣ |
| ಫೆಬ್ರವರಿ | ಕನಿಷ್ಠ | ಸಾಧಾರಣ | ಸಾಧಾರಣ | ಸಾಧಾರಣ |
| ಮಾರ್ಚ್ | ಕನಿಷ್ಠ | ಸಾಧಾರಣ | ಸಾಧಾರಣ | ತೀವ್ರ |
| ಏಪ್ರಿಲ್ | ಸಾಧಾರಣ | ಸಾಧಾರಣ | ಕನಿಷ್ಠ | ತೀವ್ರ |
| ಮೇ | ಸಾಧಾರಣ | ಕನಿಷ್ಠ | ಕನಿಷ್ಠ | ತೀವ್ರ |
| ಜೂನ್ | ಸಾಧಾರಣ | ಕನಿಷ್ಠ | ಕನಿಷ್ಠ | ತೀವ್ರ |
| ಜುಲೈ | ಸಾಧಾರಣ | ಕನಿಷ್ಠ | ಕನಿಷ್ಠ | ತೀವ್ರ |
| ಆಗಸ್ಟ್ | ಸಾಧಾರಣ | ಕನಿಷ್ಠ | ಕನಿಷ್ಠ | ತೀವ್ರ |
| ಸೆಪ್ಟೆಂಬರ್ | ಕನಿಷ್ಠ | ಸಾಧಾರಣ | ಕನಿಷ್ಠ | ತೀವ್ರ |
| ಅಕ್ಟೋಬರ್ | ಸಾಧಾರಣ | ಸಾಧಾರಣ | ಕನಿಷ್ಠ | ಸಾಧಾರಣ |
| ನವೆಂಬರ್ | ಕನಿಷ್ಠ | ಸಾಧಾರಣ | ಕನಿಷ್ಠ | ಕನಿಷ್ಠ |
| ಡಿಸೆಂಬರ್ | ಕನಿಷ್ಠ | ಕನಿಷ್ಠ | ಕನಿಷ್ಠ | ತೀವ್ರ |

ಕನಿಷ್ಠ ಸಾಧಾರಣ ತೀವ್ರ



**ಲಕ್ಷಣಗಳು:** ರೋಗಗ್ರಸ್ಥ ಹುಳುವಿನ ಚರ್ಮವು ಹೊಳೆಯುತ್ತದೆ ಹಾಗೂ ಸುಲಭವಾಗಿ ಒಡೆಯುತ್ತದೆ. ಅಂತರವಲಯ ಭಾಗವು ಊದಿಕೊಳ್ಳುವುದು, ಜ್ವರಕ್ಕೆ ಹೋಗಲು ವಿಫಲವಾಗುವುದು ಮತ್ತು ಬಿಡುವಿಲ್ಲದೆ ಓಡಾಡುತ್ತಿರುತ್ತವೆ, ಒಡೆದ ಚರ್ಮದಿಂದ ದಟ್ಟ ಬಿಳಿಯ ರಸವು ಹೊರಬರುತ್ತದೆ. ಈ ರಸದಲ್ಲಿ ಲಕ್ಷಾಂತರ ಬೀಜ ಕಾಯಗಳು ತುಂಬಿಕೊಂಡಿರುತ್ತವೆ.

**ನಿರ್ವಹಣೆ:** ಹುಳು ಸಾಕಾಣಿಕೆ ಮನೆ, ಪರಿಸರ ಮತ್ತು ಸಲಕರಣೆಗಳನ್ನು ಎರಡು ಬಾರಿ ಸೋಂಕು ನಿವಾರಿಸುವುದು, ಹೆಚ್ಚುವರಿಯಾಗಿ ಸುಣ್ಣದ ತಿಳಿನೀರಿನಿಂದ ಸೋಂಕು ನಿವಾರಣೆ ಮಾಡುವುದು, ಶುಚಿತ್ವ ಕಾಪಾಡುವುದು. ಪ್ರಾರಂಭಿಕ ಹಂತದಲ್ಲೇ ರೋಗಗ್ರಸ್ಥ ಹುಳುಗಳನ್ನು ಆಯ್ದು ಸರಿಯಾದ ರೀತಿಯಲ್ಲಿ ನಾಶಪಡಿಸಬೇಕು, ಅಂಕುಶ್/ವಿಜೇತವನ್ನು ನಿಗದಿತ ಸಮಯದಲ್ಲಿ ಶಿಫಾರಸ್ಸು ಮಾಡಿರುವ ಪ್ರಮಾಣದಲ್ಲಿ ಉಪಯೋಗಿಸಬೇಕು. ಪ್ರಶಸ್ತವಾದ ಉಷ್ಣಾಂಶ ಹಾಗೂ ಶೈತ್ಯಾಂಶ ಒದಗಿಸಬೇಕು. ಹುಳು ಹಾಸಿಗೆಯಲ್ಲಿ ಹುಳುಗಳು ಒತ್ತಾಗಿ ಇರಬಾರದು ಹಾಗೂ ಸ್ಥಳಾವಕಾಶ ಮತ್ತು ಗಾಳಿ ಸಂಚಾರ ಇರಬೇಕು. ಉತ್ತಮ ಗುಣಮಟ್ಟದ ಸೊಪ್ಪನ್ನು ಅಗತ್ಯ ಪ್ರಮಾಣದಲ್ಲಿ ನೀಡಬೇಕು. ರೋಗ ಗುಣಪಡಿಸಲು/ಹತೋಟಿ ಮಾಡಲು ಅಮೃತ್‌ನ್ನು ಶಿಫಾರಸ್ಸು ಮಾಡಲಾಗಿರುವ ಪ್ರಮಾಣದಲ್ಲಿ ನಿಗದಿತ ಸಮಯದಲ್ಲಿ ನೀಡಬೇಕು.

## ಸಪ್ಪೆ ರೋಗ

| ತಿಂಗಳು | ಚಾಮರಾಜ ನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಹಾವೇರಿ |
|---|---|---|---|---|
| ಜನವರಿ | ಕನಿಷ್ಠ | ಕನಿಷ್ಠ | ಕನಿಷ್ಠ | ತೀವ್ರ |
| ಫೆಬ್ರವರಿ | ಕನಿಷ್ಠ | ತೀವ್ರ | ಸಾಧಾರಣ | ತೀವ್ರ |
| ಮಾರ್ಚ್ | ಕನಿಷ್ಠ | ಸಾಧಾರಣ | ಸಾಧಾರಣ | ತೀವ್ರ |
| ಏಪ್ರಿಲ್ | ಕನಿಷ್ಠ | ಸಾಧಾರಣ | ಕನಿಷ್ಠ | ತೀವ್ರ |
| ಮೇ | ಸಾಧಾರಣ | ಸಾಧಾರಣ | ಕನಿಷ್ಠ | ತೀವ್ರ |
| ಜೂನ್ | ಸಾಧಾರಣ | ಸಾಧಾರಣ | ಕನಿಷ್ಠ | ತೀವ್ರ |
| ಜುಲೈ | ಸಾಧಾರಣ | ಸಾಧಾರಣ | ಕನಿಷ್ಠ | ತೀವ್ರ |
| ಆಗಸ್ಟ್ | ಸಾಧಾರಣ | ಸಾಧಾರಣ | ಕನಿಷ್ಠ | ತೀವ್ರ |
| ಸೆಪ್ಟೆಂಬರ್ | ಕನಿಷ್ಠ | ಸಾಧಾರಣ | ಕನಿಷ್ಠ | ತೀವ್ರ |
| ಅಕ್ಟೋಬರ್ | ಕನಿಷ್ಠ | ಸಾಧಾರಣ | ಕನಿಷ್ಠ | ತೀವ್ರ |
| ನವೆಂಬರ್ | ಕನಿಷ್ಠ | ಸಾಧಾರಣ | ಕನಿಷ್ಠ | ತೀವ್ರ |
| ಡಿಸೆಂಬರ್ | ಕನಿಷ್ಠ | ಸಾಧಾರಣ | ಕನಿಷ್ಠ | ತೀವ್ರ |

ಕನಿಷ್ಠ ಸಾಧಾರಣ ತೀವ್ರ



**ಲಕ್ಷಣಗಳು:** ಹುಳು ಮೃದುವಾಗಿ ಸಂಕುಚಿತಗೊಳ್ಳುತ್ತದೆ. ಬೆಳವಣಿಗೆ ಕುಂಠಿತಗೊಂಡು, ಮಂದಗತಿಯಿಂದ ಕೂಡಿ ಜಠರ ರಸವನ್ನು ಸ್ರವಿಸುತ್ತವೆ. ಹಿಕ್ಕೆಯು ಮೃದುವಾಗಿದ್ದು ಹೆಚ್ಚಿನ ತೇವಾಂಶದಿಂದ ಕೂಡಿರುತ್ತದೆ. ಕೆಲವೊಮ್ಮೆ ಹಿಕ್ಕೆಯು ಸರದ ರೂಪದಲ್ಲಿರುತ್ತದೆ (ಸರಪಿಕ್ಕೆ) ಮತ್ತು ಗುದನಾಳವು ಹೊರಕ್ಕೆ ಚಾಚಿಕೊಂಡಿರುತ್ತದೆ.

**ನಿರ್ವಹಣೆ:** ಹುಳು ಸಾಕಾಣಿಕೆ ಮನೆ, ಸಾಮಗ್ರಿ ಮತ್ತು ಪರಿಸರದ ಸೋಂಕು ನಿವಾರಣೆಯನ್ನು ಶಿಫಾರಸ್ಸು ಮಾಡಲಾಗಿರುವ ಸೋಂಕುನಿವಾರಕದೊಂದಿಗೆ ಎರಡು ಬಾರಿ ಮಾಡಿ. ಹಿಂದಿನ ಬೆಳೆಯಲ್ಲಿ ಸಪ್ಪೆರೋಗ ಕಂಡು ಬಂದಿದ್ದಲ್ಲಿ ಶೇ. 0.3ರ ಸುಣ್ಣದ ತಿಳಿ ನೀರಿನಿಂದ ಹೆಚ್ಚುವರಿ ಸೋಂಕು ನಿವಾರಣೆ ಮಾಡಿ. ರೋಗ ಪೀಡಿತ ಹುಳುಗಳನ್ನು ಆದಷ್ಟು ಬೇಗ ಆಯ್ದು, ಸುಟ್ಟು ನಾಶಪಡಿಸಿ. ಅಂಕುಶ್/ ವಿಜೇತ ಹಾಸಿಗೆ ಸೋಂಕು ನಿವಾರಕಗಳನ್ನು ಶಿಫಾರಸ್ಸಿನಂತೆ ಬಳಸಿ, ಉತ್ತಮ ಗುಣ ಮಟ್ಟದ ಸೊಪ್ಪು ನೀಡಬೇಕು. ಬಲಿತ/ಶೇಖರಿಸಿದ/ಮಣ್ಣಿನಿಂದ ಕೂಡಿದ ಸೊಪ್ಪನ್ನು ನೀಡಬಾರದು. ರೇಷ್ಮೆ ಹುಳು ದೀರ್ಘಕಾಲ ಹಸಿವಿನಿಂದಿರಲು ಬಿಡಬಾರದು. ಅಗತ್ಯ ಸ್ಥಳಾವಕಾಶ, ಉಷ್ಣಾಂಶ ಮತ್ತು ಶೈತ್ಯಾಂಶವನ್ನು ನಿರ್ವಹಿಸಬೇಕು. ರೋಗ ಗುಣಪಡಿಸಲು/ಹತೋಟಿ ಮಾಡಲು ನಿಗದಿತ ಸಮಯದಲ್ಲಿ ಶಿಫಾರಸ್ಸು ಮಾಡಿರುವ ಪ್ರಮಾಣದಲ್ಲಿ "ಅಮೃತ್"ನ್ನು ನೀಡಬೇಕು.

## ಸುಣ್ಣಕಟ್ಟು ರೋಗ

| ತಿಂಗಳು | ಚಾಮರಾಜ ನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಹಾವೇರಿ |
|---|---|---|---|---|
| ಜನವರಿ | ಕನಿಷ್ಠ | ಕನಿಷ್ಠ | ಸಾಧಾರಣ | ಸಾಧಾರಣ |
| ಫೆಬ್ರವರಿ | ಸಾಧಾರಣ | ಕನಿಷ್ಠ | ಕನಿಷ್ಠ | ಕನಿಷ್ಠ |
| ಮಾರ್ಚ್ | ಕನಿಷ್ಠ | ಕನಿಷ್ಠ | ಕನಿಷ್ಠ | ಕನಿಷ್ಠ |
| ಏಪ್ರಿಲ್ | ಕನಿಷ್ಠ | ಕನಿಷ್ಠ | ಕನಿಷ್ಠ | ಕನಿಷ್ಠ |
| ಮೇ | ಕನಿಷ್ಠ | ಕನಿಷ್ಠ | ಕನಿಷ್ಠ | ಕನಿಷ್ಠ |
| ಜೂನ್ | ಕನಿಷ್ಠ | ಕನಿಷ್ಠ | ಕನಿಷ್ಠ | ಕನಿಷ್ಠ |
| ಜುಲೈ | ಕನಿಷ್ಠ | ಕನಿಷ್ಠ | ಕನಿಷ್ಠ | ಕನಿಷ್ಠ |
| ಆಗಸ್ಟ್ | ಕನಿಷ್ಠ | ಕನಿಷ್ಠ | ಕನಿಷ್ಠ | ಕನಿಷ್ಠ |
| ಸೆಪ್ಟೆಂಬರ್ | ಕನಿಷ್ಠ | ಕನಿಷ್ಠ | ಕನಿಷ್ಠ | ಕನಿಷ್ಠ |
| ಅಕ್ಟೋಬರ್ | ಕನಿಷ್ಠ | ಕನಿಷ್ಠ | ಕನಿಷ್ಠ | ಕನಿಷ್ಠ |
| ನವೆಂಬರ್ | ಕನಿಷ್ಠ | ಕನಿಷ್ಠ | ತೀವ್ರ | ಕನಿಷ್ಠ |
| ಡಿಸೆಂಬರ್ | ಕನಿಷ್ಠ | ಕನಿಷ್ಠ | ಕನಿಷ್ಠ | ಕನಿಷ್ಠ |

ಕನಿಷ್ಠ ಸಾಧಾರಣ ತೀವ್ರ



**ಲಕ್ಷಣಗಳು:** ರೇಷ್ಮೆ ಹುಳುಗಳು ಜೀರ್ಣಶಕ್ತಿ ಕಳೆದುಕೊಂಡು ನಿಷ್ಕ್ರಿಯಗೊಳ್ಳುತ್ತವೆ. ಸಾಯುವ ಹಂತ ತಲುಪಿ ಶರೀರ ಮೃದುವಾಗಿ, ಸುಕ್ಕುಬಿದ್ದಂತಾಗುತ್ತದೆ. ಹುಳುಗಳು ಸತ್ತ ಕೆಲವು ಸಮಯದ ನಂತರ ಅವುಗಳ ಶರೀರವು ಗಟ್ಟಿಯಾಗಿ ಬತ್ತಿ ಹೋಗುತ್ತದೆ ಮತ್ತು ಇದರ ಮೇಲೆ ಶಿಲೀಂಧ್ರದ ಬೀಜಗಳು ಉತ್ಪತ್ತಿಗೊಳ್ಳುತ್ತವೆ.

**ನಿರ್ವಹಣೆ:** ಶಿಫಾರಸ್ಸು ಮಾಡಲಾಗಿರುವ ಸೋಂಕು ನಿವಾರಕಗಳಿಂದ ಹುಳುಸಾಕಾಣಿಕೆ ಮನೆ, ಪರಿಸರ ಹಾಗೂ ಪರಿಕರಗಳನ್ನು ಎರಡು ಬಾರಿ ಸೋಂಕು ನಿವಾರಣೆ ಮಾಡಿ. ಹಿಪ್ಪುನೇರಳೆ ತೋಟದಲ್ಲಿ ಪರ್ಯಾಯ ಮೂಲ ಕೀಟ ಪೀಡೆಗಳನ್ನು ಹತೋಟಿಯಲ್ಲಿಡಬೇಕು. ರೋಗ ತಗುಲಿರಬಹುದಾದ, ಸೀಮೆಸುಣ್ಣದಂತೆ ಗಟ್ಟಿಯಾಗಿರುವ ಹಾಗೂ ಸತ್ತಿರುವ ಹುಳುಗಳನ್ನು ಬೆಂಕಿಯಲ್ಲಿ ಹಾಕಿ ಸುಟ್ಟು ನಾಶಪಡಿಸಿ. ಹುಳು ಸಾಕಣೆ ಮನೆಯಲ್ಲಿ ಅಗತ್ಯವಿರುವ ಉಷ್ಣಾಂಶ ಮತ್ತು ಶೈತ್ಯಾಂಶ ನಿರ್ವಹಿಸಿ. ಮಳೆಗಾಲದಲ್ಲಿ ಜ್ವರದ ಸಮಯದಲ್ಲಿ ಹುಳು ಹಾಸಿಗೆಗೆ ಸುಣ್ಣ ಧೂಳೀಕರಿಸಿ, ಶೈತ್ಯಾಂಶವನ್ನು ನಿಯಂತ್ರಿಸಿ ಹಾಸಿಗೆ ಸೋಂಕು ನಿವಾರಕಗಳಾದ ಅಂಕುಶ್, ವಿಜೇತ ಮತ್ತು ವಿಜೇತ ಸಪ್ಲಿಮೆಂಟ್‌ನ್ನು ನಿಗದಿತ ಸಮಯಕ್ಕೆ ಶಿಫಾರಸ್ಸು ಮಾಡಲಾದ ಪ್ರಮಾಣದಲ್ಲಿ ಧೂಳೀಕರಿಸಿ.